## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಸ್. ಆರ್. ಪಟೇಲಪ್ಪ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಛೇರಿ ಬೆಂಗಳೂರು. ಇವರ ವಿರುದ್ಧ ದಾಖಲಾದ ಲೋಕಾಯುಕ್ತ ದಾಳಿ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ:-**

1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು. ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ ಬಿಡಿ-88/ಸಿಆರ್-16/2008 ಚಿಕ್ಕಬಳ್ಳಾಪುರ. ದಿನಾಂಕ: 26-04-2011.
2. ತನಿಖಾಧಿಕಾರಿಯವರ ಅಂತಿಮ ತನಿಖಾ ವರದಿ ದಿನಾಂಕ: 18-04-2011.
3. ಅಂತಿಮ ತನಿಖಾ ದಾಖಲಾತಿಗಳಾದ ಪ್ರಥಮ ವರ್ತಮಾನ ವರದಿ, ಶೋಧನಾ ಪಂಚನಾಮಗಳು, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿಯವರ ಅಂತಿಮ ವರದಿಯ ಕಡತಗಳು.
4. ಸರ್ಕಾರದ ಆದೇಶ ಸಂಖ್ಯೆ: ಕೃಇ 4 ಕೃಪವಿ 2009. ದಿನಾಂಕ: 05-11-2011.
5. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು. ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ ಬಿಡಿ-88/ಸಿಆರ್-16/2008 ಚಿಕ್ಕಬಳ್ಳಾಪುರ, ದಿನಾಂಕ: 12-12-2011.

*********

**ಪ್ರಸ್ತಾವನೆ:-**

ಕ್ರ.ಸಂ.(1)ರಲ್ಲಿ ಓದಲಾದ ಪತ್ರದಲ್ಲಿ, ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು. ಇವರು ಶ್ರೀ ಎಸ್. ಆರ್. ಪಟೇಲಪ್ಪ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಛೇರಿ ಬೆಂಗಳೂರು. ಇವರ ವಿರುದ್ಧ ಮೊಕದ್ದಮೆ ಸಂಖ್ಯೆ: 16/2008ರಲ್ಲಿ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ (ಉಲ್ಲೇಖ -2) ಮತ್ತು ತನಿಖಾ ದಾಖಲಾತಿಗಳನ್ನು (ಉಲ್ಲೇಖ -3) ಸರ್ಕಾರಕ್ಕೆ ಸಲ್ಲಿಸಿ, ಸದರಿ ಆಪಾದಿತರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಸಹವಾಚನಾ 13(2) ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕೆ ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು, ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಅಭಿಯೋಜನಾ ಮಂಜೂರಾತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ. ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. ಇವರು ತಮ್ಮ ಪತ್ರ ದಿನಾಂಕ: 26-04-2011 ರೊಡನೆ ಲೋಕಾಯುಕ್ತ ಪೊಲೀಸ್ ಠಾಣೆ, ಚಿಕ್ಕಬಳ್ಳಾಪುರ ಇವರು ಮೊಕದ್ದಮೆ ಸಂಖ್ಯೆ 16/2008ರಲ್ಲಿ ತನಿಖಾಧಿಕಾರಿಯವರು ತನಿಖೆ ನಡೆಸಿ ದಿನಾಂಕ: 18-04-2011 ರಲ್ಲಿ ಕಳುಹಿಸಿಕೊಟ್ಟ ಅಂತಿಮ ತನಿಖಾ ವರದಿಯಲ್ಲಿ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

--2--

1. ಪ್ರಥಮ ವರ್ತಮಾನ ವರದಿ 17-12-2008.
2. ಶೋಧನಾ ಪಂಚನಾಮೆ.
   (ಅ) ಆಪಾದಿತರ ವಾಸದ ಮನೆ. 5958/5528. ಅಂಜನಿ ಬಡಾವಣೆ ಪಶ್ಚಿಮ, ಚಿಂತಾಮಣಿ ಟೌನ್, ಚಿಕ್ಕಬಳ್ಳಾಪುರ. ದಿನಾಂಕ: 18-12-2008.
   (ಆ) ಆಪಾದಿತರ ಕಛೇರಿ, ಕೃಷಿ ಆಯುಕ್ತರ ಕಛೇರಿಯಲ್ಲಿರುವ ವಿಶ್ವ ವಾಣಿಜ್ಯ ಸಂಸ್ಥೆ ವಿಭಾಗ. ದಿನಾಂಕ: 18-12-2008.
3. ತನಿಖಾಧಿಕಾರಿಯವರ ಅಂತಿಮ ವರದಿ ದಿನಾಂಕ: 18-04-2011.
4. ತನಿಖೆಯ ಅಂತಿಮ ವರದಿಯ ಇತರ ಕಡತಗಳು -
   (ಅ) ಕಡತ ಆದಾಯದ ವಿವರಗಳು -ಆಪಾದಿತರ ಒಟ್ಟು ಆದಾಯದ ಮೊತ್ತ- 75,62,580/-
   (ಆ) ಕಡತ ಆಸ್ತಿಗಳ ವಿವರಗಳು - ಆಪಾದಿತರ ಒಟ್ಟು ಸ್ಥಿರ ಮತ್ತು ಚರಾಸ್ತಿಯ ಮೌಲ್ಯ - 1,33,05,315/-
   (ಇ) ಕಡತ ಖರ್ಚುಗಳು - ಆಪಾದಿತರ ಒಟ್ಟು ಖರ್ಚಿನ ಮೊತ್ತ- 75,29,074/-

5. ಈ ಕೆಳಕಂಡ ಸಾಕ್ಷಿದಾರರ ಹೇಳಿಕೆಗಳು.
   1) ಶ್ರೀ ವೆಂಕಟರವಣಪ್ಪ ಬಿನ್ ಲೇಟ್ ಚಿಕ್ಕವೆಂಕಟರಾಯಪ್ಪ, 40 ವರ್ಷ ಸಿಆರ್‌ಪಿ ಸರ್ವ ಶಿಕ್ಷಣ ಅಭಿಯಾನ (ಶಿಕ್ಷಣ ಇಲಾಖೆ) ಉಪ ನಿರ್ದೇಶಕರ ಕಛೇರಿ ಚಿಕ್ಕಬಳ್ಳಾಪುರ. ವಾಸ: ಹೆಚ್. ಎಸ್. ಗಾರ್ಡನ್ (ಶಿಕ್ಷಕರ ಕಾಲೋನಿ) ಚಿಕ್ಕಬಳ್ಳಾಪುರ.
   2) ಶ್ರೀ ಎನ್ ಆದಿನಾರಾಯಣಪ್ಪ ಬಿನ್ ಲೇಟ್ ವಿ. ನಾರಾಯಣಪ್ಪ, 52 ವರ್ಷ ಪ್ರ.ದ.ಸ. ಅಸಿಸ್ಟೆಂಟ್ ಕಮಿಷನರ್‌ಕಛೇರಿ, ಚಿಕ್ಕಬಳ್ಳಾಪುರ. ವಾಸ: ಟಿ.ಜಿ. ಟ್ಯಾಂಕ್ ರಸ್ತೆ, ಚಿಕ್ಕಬಳ್ಳಾಪುರ ನಗರ.
   3) ಶ್ರೀಮತಿ ಕೆ.ಎಸ್. ಮಂಜುಳ ಬಿನ್ ಕೆ.ಹೆಚ್. ಸಂಜೀವಪ್ಪ ದ್ವಿ.ದ.ಸ ಸರ್ಕಾರಿ ಪದವಿ ಕಾಲೇಜು ಚಿಕ್ಕಬಳ್ಳಾಪುರ. ವಾಸ: ಟಿ. ಚೆನ್ನಯ್ಯ ಬಡಾವಣೆ, 1ನೇ ಮುಖ್ಯ ರಸ್ತೆ, ನಾಗವಾರ. ಬೆಂಗಳೂರು.
   4) ಅಹ್ಮದ್ ಬಿನ್ ಖಾದರ್ ವಲಿ, 32 ವರ್ಷ, ಗಾರೆ ಕೆಲಸ. ವಾಸ: ಕಂದುಕೂರು ಗ್ರಾಮ, ಕಂಬಾಲ ಪಲ್ಲಿ ತಾಲ್ಲೂಕು, ಚಿತ್ತೂರು ಜಿಲ್ಲೆ.
   5) ಶ್ರೀ ನಾಗರಾಜ್ ಬಿನ್ ಲೇಟ್ ನಾರಣಯ್ಯ, 56 ವರ್ಷ, ಚಿನ್ನದ ವ್ಯಾಪಾರ, ವಾಸ: ಚಿಂತಾಮಣಿ ನಗರದ 1ನೇ ವಿಭಾಗ, ಎನ್.ಆರ್. ಬಡಾವಣೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
   6) ಶ್ರೀ ಎನ್. ಶ್ರೀನಿವಾಸ ಬಿನ್ ಲೇಟ್ ನಾರಣಯ್ಯ, 58 ವರ್ಷ, ಚಿನ್ನದ ವ್ಯಾಪಾರ, ವಾಸ: ಚಿಂತಾಮಣಿ ನಗರದ 1ನೇ ವಿಭಾಗ, ಎನ್. ಆರ್. ಬಡಾವಣೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
   7) ಶ್ರೀ ಮೂರ್ತಿ ಬಿನ್ ಹನುಮಂತೇಗೌಡ, 46 ವರ್ಷ, ವ್ಯವಸಾಯ, ವಾಸ: ಕೇರ್ ಆಫ್ ಪಟೇಲಪ್ಪ, ಅಂಜನಿ ಬಡಾವಣೆ ಟೌನ್, ಚಿಕ್ಕಬಳ್ಳಾಪುರ ಜಿಲ್ಲೆ.
   8) ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ವೆಂಕಟೇಶಪ್ಪ, ಭೋವಿ ಜನಾಂಗ, 33 ವರ್ಷ, ಕೂಲಿ ಕೆಲಸ, ಬಂಡಿಹಳ್ಳಿ ಗ್ರಾಮ, ಬೈಲುನರಸಾಪುರ ಪೋಸ್ಟ್, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
   9) ಶ್ರೀ ಆರ್.ವಿ. ಕುದರಿ, ರೇಷ್ಮೆ ಸಹಾಯಕ ನಿರ್ದೇಶಕರು, ಕೋಲಾರ ವಿಭಾಗ, ಕೋಲಾರ.
   10) ಶ್ರೀ ಎನ್. ರಾಮಕೃಷ್ಣ, ವಲಯ ಅರಣ್ಯಾಧಿಕಾರಿಗಳು, ಕೋಲಾರ ವಲಯ, ಕೋಲಾರ.
   11) ಶ್ರೀ ಶಶಿಧರ, ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ.

305



12) ಶ್ರೀಮತಿ ಗಾಯಿತ್ರಿ, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೋಲಾರ ಜಿಲ್ಲೆ,- ಕೋಲಾರ.

13) ಶ್ರೀ. ಶ್ರೀರಾಮರೆಡ್ಡಿ, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಿಂತಾಮಣಿ ಟೌನ್, ಚಿಕ್ಕಬಳ್ಳಾಪುರ ಜಿಲ್ಲೆ.

14) ಶ್ರೀ. ಸುಬ್ಬರಾಯಪ್ಪ, ಬಿನ್ ರಾಮಕೃಷ್ಣಪ್ಪ, ನಂ.78, ಐಮರೆಡ್ಡಿ ಹಳ್ಳಿ, ಚಿಂತಾಮಣಿ ಟೌನ್, ಚಿಕ್ಕಬಳ್ಳಾಪುರ ಜಿಲ್ಲೆ.

15) ಶ್ರೀ ಆನಂದ್.ಎ ಮ್ಯಾನೇಜರ್ ಅಡ್ಮಿನ್ ಮತ್ತು ಫೆಸಿಲಿಟಿಸ್, ಕಂಟ್ರಿ ಕ್ಲಬ್, ನಂ: 271, 1ನೇ ಮೈನ್ ರೋಡ್, ಡಿಫೆನ್ಸ್ ಕಾಲೋನಿ, ಹೆಚ್.ಎ.ಎಲ್. 2ನೇ ಹಂತ, ಇಂದಿರಾ ನಗರ ಬೆಂಗಳೂರು.

16) ಡಾ॥ ಬಿ. ಶಿಸವಪ್ಪ, ಮ್ಯಾನೆಜಿಂಗ್ ಡೈರೆಕ್ಟರ್, ಅಪೂರ್ವ ಡೈಯಾಗ್ನಿಸ್ಟಿಕ್ ಸೆಂಟರ್, ನಂ: 325, 1ನೇ ಮಹಡಿ, ಚಿನ್ಮಯ ಮಿಷನ್ ಹಾಸ್ಪಟಲ್ ರೋಡ್, ಇಂದಿರಾ ನಗರ ಬೆಂಗಳೂರು.

17) ಶ್ರೀಮತಿ ಜಯಮ್ಮ, ಉಪ ನೋಂದಣಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.

18) ಶ್ರೀ ಲಕ್ಷೀ ಪ್ರಸಾದ್, ಉಪ ನೋಂದಣಾಧಿಕಾರಿಗಳು, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

19) ಶ್ರೀಸಂಪತ್ ಕುಮಾರ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.

20) ಶ್ರೀ ಅಫ್ಜಲ್ಅಹ್ಮದ್ ಖಾನ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

21) ಶ್ರೀ ಗೋವಿಂದ ರಾಜು, ಮ್ಯಾನೇಜರ್, ಎಸ್.ಎಲ್.ಎನ್.ಗ್ಯಾಸ್ ಏಜೆನ್ಸಿಸ್, ಪಂಪ್ ಹತ್ತಿರ, ಎಂ.ಜಿ. ರಸ್ತೆ, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ.

22) ಶ್ರೀ. ಹೆಚ್.ಆರ್. ತಿಪ್ಪೇಶ್, ಸಹಾಯಕ ಕೃಷಿ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ.

23) ಡಾ. ಹೆಚ್. ನಟರಾಜ್, ಸಮಾಜ ಕಲ್ಯಾಣ ಅಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.

24) ಶ್ರೀ ರಾಘವೇಂದ್ರ, ಸಹಾಯಕ ಕೃಷಿ ನಿರ್ದೇಶಕರು, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

25) ಶ್ರೀ ವೆಂಕಟೇಶ್ ಎ.ಎಸ್, ಕೃಷಿ ಅಧಿಕಾರಿಗಳು, ಕೃಷಿ ಇಲಾಖೆ, ಮಾಲೂರು ಕೋಲಾರ ಜಿಲ್ಲೆ.

26) ಶ್ರೀ. ಸಲೀಂ ಸಂಗತ್ರಾಸ, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಅಥಣಿ, ಬೆಳಗಾಂ ಜಿಲ್ಲೆ.

27) ಶ್ರೀ. ಎನ್.ಜಿ. ಮೂರ್ತಿ, ಆಡಳಿತ ಸಹಾಯಕರು, ಕೃಷಿ ಇಲಾಖೆ, ಅರಕಲಗೂಡು, ಹಾಸನ ಜಿಲ್ಲೆ.

28) ಶ್ರೀ. ಪಿ.ವಿ. ನಾಗಪ್ಪ, ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಬಾಗೇ ಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ.

29) ಶ್ರೀ ವಿ. ಗಜರಾಜು ಡ್ಯಾನಿಯಲ್, ಪ್ರಾಂಶುಪಾಲರು, ಸೆವೆಂತ್‌ಡೇ ಅಡ್ವೆಂಟಿಸ್ಟ್ ಇಂಗ್ಲೀಷ್ ಹೈಸ್ಕೂಲ್, ರಾಬರ್ಟ್‌ಸನ್ ಪೇಟ್, ಕೆ.ಜಿ.ಎಫ್. ಕೋಲಾರ ಜಿಲ್ಲೆ.

30) ಡಾ. ಶಿವಕುಮಾರಯ್ಯಾ, ಪ್ರಾಂಶುಪಾಲರು, ಸಿದ್ಧಗಂಗಾ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು.

31) ಡಾ. ರಾಜರಾವ್, ಪ್ರಾಂಶುಪಾಲರು, ಆರ್.ವಿ. ಇಂಜಿನಿಯರಿಂಗ್ ಕಾಲೇಜು, ಮೈಸೂರು ರಸ್ತೆ, ಬೆಂಗಳೂರು.

32) ಶ್ರೀ ಎಂ.ಕೆ. ವೆಂಕಟೇಶ್, ಪ್ರಾಂಶುಪಾಲರು, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಬೆಂಗಳೂರು.

33) ಶ್ರೀ ಸತೀಶ್ ಬಾಬು, ವ್ಯವಸ್ಥಾಪಕರು, ವೈಶ್ಯ ಬ್ಯಾಂಕ್ ಕೋಲಾರ ಶಾಖೆ, ಕೋಲಾರ.

34) ಶ್ರೀ ರಾಮಚಂದ್ರಪ್ಪ, ವ್ಯವಸ್ಥಾಪಕರು, ಪ್ರಗತಿ ಗ್ರಾಮೀಣಾ ಬ್ಯಾಂಕ್, ಬೆಳಮಾರನಹಳ್ಳಿ ಶಾಖೆ, ಕೋಲಾರ ತಾಲ್ಲೂಕು.

35) ಶ್ರೀ ನೀಲಕಂಠನ್, ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಾಲೂರು ಶಾಖೆ, ಕೋಲಾರ ಜಿಲ್ಲೆ.

36) ಶ್ರೀ ಸುರೇಶ್, ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೋಲಾರ ಶಾಖೆ, ಕೋಲಾರ.

37) ಶ್ರೀ ವಿ.ಎಸ್. ಕಾಮತ್, ವ್ಯವಸ್ಥಾಪಕರು, ಪ್ರಗತಿ ಗ್ರಾಮೀಣಾ ಬ್ಯಾಂಕ್, ಎಂ.ಜಿ. ರಸ್ತೆ ಶಾಖೆ, ಕೋಲಾರ ಟೌನ್, ಕೋಲಾರ.

38) ಶ್ರೀ ಎಂ.ಪಿ. ಬಸವನಗೌಡ, ವ್ಯವಸ್ಥಾಪಕರು, ಪ್ರಗತಿ ಗ್ರಾಮೀಣಾ ಬ್ಯಾಂಕ್, ಕೀಲು ಕೋಟೆ ಶಾಖೆ, ಕೋಲಾರ ಟೌನ್, ಕೋಲಾರ.

39) ಶ್ರೀ ನಾಗರಾಜ್, ವ್ಯವಸ್ಥಾಪಕರು, ಕೆನರ್ ಬ್ಯಾಂಕ್, ಕೋಲಾರ ಶಾಖೆ, ಕೋಲಾರ ಜಿಲ್ಲೆ ಕೋಲಾರ.

40) ಶ್ರೀ ಎಸ್.ಸಿ. ಜಯರಾಮ್, ವ್ಯವಸ್ಥಾಪಕರು, ವಿಜಯ ಬ್ಯಾಂಕ್, ನರಸಾಪುರ ಶಾಖೆ, ಕೋಲಾರ ತಾಲ್ಲೂಕು.

41) ಶ್ರೀ ಕೆ.ಮಂಜುನಾಥ, ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚಿಂತಾಮಣಿ ಬ್ರಾಂಚ್, ಚಿಕ್ಕಬಳ್ಳಾಪುರ ಜಿಲ್ಲೆ.

42) ಶ್ರೀ ಕೆ. ಸತೀಶ್‌ಕುಮಾರ್, ವ್ಯವಸ್ಥಾಪಕರು, ಡಿ.ಹೆಚ್.ಎಫ್.ಎಲ್ (ವೈಶ್ಯ ಹೌಸಿಂಗ್ ಫೈನಾನ್ಸ್), 17ನೇ ಮತ್ತು 18ನೇ ಕ್ರಾಸ್, ಮಲ್ಲೇಶರಂ, ಬೆಂಗಳೂರು.

43) ಶ್ರೀ ಸತೀಶ್, ವ್ಯವಸ್ಥಾಪಕರು, ಐ.ಎನ್.ಜಿ. ವೈಶ್ಯಾ ಬ್ಯಾಂಕ್, ಚಿಂತಾಮಣಿ ಬ್ರಾಂಚ್, ಚಿಕ್ಕಬಳ್ಳಾಪುರ ಜಿಲ್ಲೆ.

44) ಶ್ರೀ ಮಂಜುನಾಥ, ವ್ಯವಸ್ಥಾಪಕರು, ಹೆಚ್.ಡಿ.ಎಫ್.ಸಿ. ಇಂದಿರಾನಗರ ಬ್ರಾಂಚ್, ಬೆಂಗಳೂರು.

45) ಶ್ರೀ ನವೀನ್ ಪ್ರಸಾದ್, ಸಹಾಯಕ ವ್ಯವಸ್ಥಾಪಕರು, ಕಾನೂನು ವಿಭಾಗ, ಹೆಚ್.ಡಿ.ಎಫ್.ಸಿ. ಕಸ್ತೂರ್ ಬಾ ರೋಡ್, ಬೆಂಗಳೂರು.

46) ಶ್ರೀ ಜಿ. ಮಂಜುನಾಥ, ವ್ಯವಸ್ಥಾಪಕರು, ಐ.ಎನ್.ಜಿ. ವೈಶ್ಯಾ ಬ್ಯಾಂಕ್, ಆರ್.ವಿ. ಇಂಜಿನಿಯರಿಂಗ್ ಕಾಲೇಜ್ ಶಾಖೆ, ಬೆಂಗಳೂರು.

47) ಶ್ರೀ ಸುರೇಂದ್ರ, ವ್ಯವಸ್ಥಾಪಕರು, ಎಸ್.ಬಿ.ಎಂ., ಬಿ.ಹೆಚ್.ಇ.ಎಲ್. ಬ್ರಾಂಚ್, ಮೈಸೂರು ರೋಡ್ ಬೆಂಗಳೂರು.

48) ಶ್ರೀ ಹೆಚ್.ಎಂ. ಗೋಪಾಲಕೃಷ್ಣ, ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಮೈನ್ ಬ್ರಾಂಚ್, ಹೆಚ್.ಎನ್. ರೋಡ್, ಹಾಸನ.

49) ಶ್ರೀ ಎ. ಸೋಮಪ್ಪ, ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಲೇಡಿ ಕರ್ಜನ್ ರೋಡ್ ಬ್ರಾಂಚ್, ಬೆಂಗಳೂರು.

50) ಡಾ. ಆರ್.ನಾಜರಾಜ್, ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್, ಎಸ್.ಐ.ಟಿ. ಬ್ರಾಂಚ್, ಎಸ್.ಎಸ್.ಪುರಂ, ತುಮಕೂರು.

51) ಶ್ರೀಮತಿ ಚಂದ್ರಸುರೇಶ್, ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಶಿಡ್ಲಘಟ್ಟ ಬ್ರಾಂಚ್, ಚಿಕ್ಕಬಳ್ಳಾಪುರ ಜಿಲ್ಲೆ.

52) ಶ್ರೀ ವೇಣುಗೋಪಾಲ್, ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬಾಗೇಪಲ್ಲಿ ಬ್ರಾಂಚ್, ಚಿಕ್ಕಬಳ್ಳಾಪುರ ಜಿಲ್ಲೆ.

53) ಶ್ರೀ ನಾಗೇಂದ್ರ ಪ್ರಸಾದ್, ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಬಾಗೇಪಲ್ಲಿ ಬ್ರಾಂಚ್, ಚಿಕ್ಕಬಳ್ಳಾಪುರ ಜಿಲ್ಲೆ.

ಪ್ರಥಮ ವರ್ತಮಾನದ ವರದಿಯ ಪ್ರಕಾರ ಶ್ರೀ ಎಸ್. ಆರ್. ಪಟೇಲಪ್ಪ ಮತ್ತು ಅವರ ಕುಟುಂಬದ ಆದಾಯದ ಮೊತ್ತ ರೂ. 40,00,000-00, ಅವರ ಹೆಸರಿನಲ್ಲಿರುವ ಆಸ್ತಿಯ ವಿವರಗಳ ಒಟ್ಟು ಮೊತ್ತ ರೂ. 1,31,00,000-00, ಮತ್ತು ಒಟ್ಟು ಖರ್ಚಿನ ಮೊತ್ತ ರೂ. 28,00,000-00.

ತನಿಖಾಧಿಕಾರಿ ಶ್ರೀ ಕೆ. ಮೋಪುರ್ ರೆಡ್ಡಿ ಪೋಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ಚಿಕ್ಕಬಳ್ಳಾಪುರ ರವರು ಶ್ರೀ ಎಸ್. ಆರ್. ಪಟೇಲಪ್ಪ ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಛೇರಿ ಬೆಂಗಳೂರು. ಇವರ ವಿರುದ್ಧ ದಂಡಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಚಿಕ್ಕಬಳ್ಳಾಪುರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 16/2008ರಲ್ಲಿ ಲಂಚ ನಿರೋಧ ಕಾಯ್ದೆ ಕಲಂ 13(1)(ಇ) ಜೊತೆಯಲ್ಲಿ ಓದಲಾದ ಕಲಂ 13(2) ರಡಿಯಲ್ಲಿ ದೂರನ್ನು ದಾಖಲಿಸಿಕೊಂಡಿರುತ್ತಾರೆ. ನಂತರ ದಿನಾಂಕ: 18-12-2008 ರಲ್ಲಿ ಆಪಾದಿತರ ವಾಸದ ಮನೆ ಮತ್ತು ಕಛೇರಿಯನ್ನು ಪಂಚ ಸಾಕ್ಷಿಗಳ ಸಮಕ್ಷಮ ಶೋಧನೆ ಮಾಡಿರುತ್ತಾರೆ. ನಂತರ ಈ ಪ್ರಕರಣವನ್ನು ಮುಂದಿನ ತನಿಖೆಗಾಗಿ ಕರ್ನಾಟಕ ಲೋಕಾಯುಕ್ತ ಚಿಕ್ಕಬಳ್ಳಾಪುರ ಉಪಾಧೀಕ್ಷಕರಾದ ಶ್ರೀ ಎಂ. ಸಿ. ಬೂದಿಹಾಳ್‌ರವರಿಗೆ ನೀಡಿರುತ್ತಾರೆ.

ಶೋಧನ ಸಂದರ್ಭದಲ್ಲಿ ಬರೆಯಲಾದ ಶೋಧನಾ ಮಹಜರು ಪ್ರಕಾರ ಚರ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳು ಪತ್ತೆಯಾಗಿರುತ್ತವೆ. ಸದರಿ ಪ್ರಕರಣದ ತನಿಖೆಯು ಪೂರ್ಣಗೊಂಡ ನಂತರ ಆಪಾದಿತ ಸರ್ಕಾರಿ ಅಧಿಕಾರಿ ಶ್ರೀ ಎಸ್. ಆರ್. ಪಟೇಲಪ್ಪ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಛೇರಿ, ಬೆಂಗಳೂರು, ಇವರು ದಿನಾಂಕ: 23-04-1979 ರಿಂದ ದಿನಾಂಕ: 18-12-2008ರ ವರೆಗಿನ ಪರಿಶೀಲನಾ ಅವಧಿಯಲ್ಲಿ ರೂ. 1,33,05,315/- ಗಳ ಆಸ್ತಿಯನ್ನು ಹೊಂದಿರುತ್ತಾರೆಂದು ಈ ಅವಧಿಯಲ್ಲಿ ಆಪಾದಿತರು ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರಿಗಾಗಿ ಮಾಡಿರುವ ಒಟ್ಟು ಖರ್ಚು ರೂ.75,29,074/- ಗಳಾಗಿದ್ದು, ಆಪಾದಿತರು ಈ ಅವಧಿಯಲ್ಲಿ ಎಲ್ಲಾ ಬಲ್ಲಮೂಲಗಳಿಂದ ಗಳಿಸಿರುವ ಆದಾಯವು ರೂ.75,62,580/- ಗಳಾಗಿರುತ್ತದೆಯೆಂದು ಕಂಡು ಬಂದಿರುತ್ತದೆ. ಆಪಾದಿತರ ಆಸ್ತಿ ಮತ್ತು ಖರ್ಚಿನ ಒಟ್ಟು ಮೊತ್ತ ರೂ 2,08,34,389/- ಹೆಚ್ಚಿನ ಪ್ರಮಾಣದ ಆಸ್ತಿಯ ಮೊತ್ತವು ರೂ. 1,32,71,809/- ಗಳಾಗಿರುತ್ತದೆ. ಅಂದರೆ ಸರ್ಕಾರಿ ನೌಕರ ಶೇಕಡ 175.49ರಷ್ಟು ತಮ್ಮ ಬಲ್ಲಮೂಲಗಳಿಗಿಂತಲೂ ಹೆಚ್ಚಿನ ಪ್ರಮಾಣದ ಆಸ್ತಿ ಹೊಂದಿರುವುದು ಕಂಡು ಬಂದಿರುತ್ತದೆ. ಇದಕ್ಕೆ ಆಪಾದಿತರ ಬಳಿ ಯಾವುದೇ ಸಮಾಧಾನಕರ ವಿವರಣೆ ಅಥವಾ ಲೆಕ್ಕ ಲಭ್ಯವಿರುವುದಿಲ್ಲ, ಈ ರೀತಿ ಪ್ರಕರಣದಲ್ಲಿ ಸಲ್ಲಿಸಿದಂತಹ ತನಿಖಾ ದಾಖಲಾತಿಗಳಾದ ಪ್ರಥಮ ಮಾಹಿತಿ ವರದಿ, ಶೋಧನಾ ಮಹಜರ್, ಸಾಕ್ಷಿಗಳ ಹೇಳಿಕೆಗಳು, ಆಸ್ತಿ ಮತ್ತು ದಾಯಿತ್ವದ

ವಿವರಣಾ ಪಟ್ಟಿಗಳು, ಆಸ್ತಿ ಆದಾಯ ಮತ್ತು ಖರ್ಚುಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಮತ್ತು ತನಿಖಾಧಿಕಾರಿಯವರ ಅಂತಿಮ ವರದಿಗಳನ್ನು ಪರಿಶೀಲಿಸಿದ ಸರ್ಕಾರವು, ಮೇಲ್ಕಂಡ ದಾಖಲಾತಿಗಳನ್ನು ಸದರಿ ಆಪಾದಿತ ಸರ್ಕಾರಿ ಅಧಿಕಾರಿಯ ಮೇಲಿನ ಆಪಾದನೆಗಳನ್ನು ಸಮರ್ಥಿಸಲು ಪೂರಕ ಸಾಕ್ಷ್ಯಗಳೆಂದು ಪರಿಗಣಿಸಿದ್ದು, ಆಪಾದಿತ ಸರ್ಕಾರಿ ಅಧಿಕಾರಿಯ ವಿರುದ್ಧದ ಪ್ರಕರಣವು ಮೇಲ್ನೋಟಕ್ಕೆ ಸಾಬೀತಾಗುವಂತೆ ಕಂಡುಬರುತ್ತದೆ. ಹೀಗೆ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ನಂತರ ಆಪಾದಿತ ಸರ್ಕಾರಿ ಅಧಿಕಾರಿಯಾದ ಶ್ರೀ. ಎಸ್. ಆರ್. ಪಟೇಲಪ್ಪ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಛೇರಿ, ಬೆಂಗಳೂರು, ಇವರು ಲಂಚ ನಿರೋಧ ಕಾಯ್ದೆ 1988ರ ಪ್ರಕಾರ ಶಿಕ್ಷಾರ್ಹ ಅಪರಾಧ ಎಸಗಿರುವುದನ್ನು ಮನವರಿಕೆ ಮಾಡಿಕೊಂಡು ಸರ್ಕಾರವು ಅವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 13(1) (ಇ) ಜೊತೆಗೆ ಕಲಂ 13 (2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ತೀರ್ಮಾನಿಸಿದೆ.

ಆದ್ದರಿಂದ ಶ್ರೀ ಎಸ್. ಆರ್. ಪಟೇಲಪ್ಪ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಛೇರಿ, ಬೆಂಗಳೂರು, ಇವರನ್ನು ಹುದ್ದೆಯಿಂದ ವಜಾಮಾಡುವ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವು ಸರ್ಕಾರವಾಗಿರುವುದರಿಂದ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಲ್ಪಟ್ಟ ದಾಖಲಾತಿಗಳ ಮತ್ತು ಮಹತ್ವದ ಸಾಕ್ಷ್ಯಗಳ ಸೂಕ್ಷ್ಮಾವಲೋಕನದ ನಂತರ ಸರ್ಕಾರವು ಶ್ರೀ ಎಸ್. ಆರ್. ಪಟೇಲಪ್ಪ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಛೇರಿ, ಬೆಂಗಳೂರು, ಅವರನ್ನು ಸದರಿ ಅಪರಾಧಕ್ಕಾಗಿ ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸುವುದು ಸೂಕ್ತವೆಂದು ಭಾವಿಸಿ ಮೇಲೆ ಕ್ರಮ ಸಂಖ್ಯೆ-4ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅಭಿಯೋಜನ ಮಂಜೂರಾತಿ ಆದೇಶ ಹೊರಡಿಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ-5ರಲ್ಲಿ ಓದಲಾದ ಪತ್ರದಲ್ಲಿ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ದಿನಾಂಕ: 05-11-2011ರ ಸರ್ಕಾರದ ಆದೇಶದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಕೋರಿರುವುದರಿಂದ, ಸದರಿ ಆದೇಶವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲು ನಿರ್ಧರಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 04 ಕೃಪವಿ 2009**
**ಬೆಂಗಳೂರು, ದಿನಾಂಕ: 18-05-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂ: ಕೃಇ 04 ಕೃಪವಿ 2009. ದಿ: 05-11-2011ನ್ನು ಈ ಮೂಲಕ ರದ್ದು ಪಡಿಸಿದೆ.

ಲಂಚ ನಿರೋಧ ಕಾಯ್ದೆ 1988 ರ 19 (1) (ಬಿ) ಕಲಂನಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ

--7--

302

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತ ಸರ್ಕಾರಿ ಅಧಿಕಾರಿಯಾದ ಶ್ರೀ ಎಸ್. ಆರ್. ಪಟೇಲಪ್ಪ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಛೇರಿ, ಬೆಂಗಳೂರು. ಇವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 13(1) (ಇ) ಜೊತೆಗೆ ಕಲಂ 13(2) ರಡಿಯಲ್ಲಿ ಓದಿದ ಪ್ರಕಾರ ಶಿಕ್ಷಾರ್ಹವಾಗಿರುವ ಅಪರಾಧ ಎಸಗಿರುವ ಬಗ್ಗೆ ಸಕ್ಷಮ ಅಧಿಕಾರವುಳ್ಳ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಈ ಮೂಲಕ ಅಭಿಯೋಜನಾ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಮುಂದುವರೆದು ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಆದೇಶಗಳು ಮತ್ತು ಅಧಿಸೂಚನೆಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕಾಗುತ್ತದೆ.

ಅದೇ ನಿಯಮಾವಳಿಯ ನಿಯಮ-19 (1) ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿರುವ ಆದೇಶಗಳು ಮತ್ತು ಅಧಿಸೂಚನೆಗಳು ಒಬ್ಬ ಅಧೀನ ಕಾರ್ಯದರ್ಶಿಯವರ ಸಹಿಯಿಂದ ಅಧಿಕೃತಗೊಳ್ಳಬೇಕು. ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ಸರ್ಕಾರದ ಪರವಾಗಿ ಕಛೇರಿಯ ಮೊಹರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿಯವರ ಸಹಿಯ ಅಡಿಯಲ್ಲಿ **ದಿನಾಂಕ: 18 ನೇ ಮೇ 2012ರಂದು** ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

18/5/12
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

**ಇವರಿಗೆ:-**

1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ಪ್ರತಿ:-**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
3. ಮಾನ್ಯ ಕೃಷಿ ಸಚಿವರ ಆಪ್ತಕಾರ್ಯದರ್ಶಿಯವರು ವಿಕಾಸಸೌಧ. ಬೆಂಗಳೂರು.
4. ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಆಪ್ತಕಾರ್ಯದರ್ಶಿ.
5. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.